ಡಾಲರುಗಳನ್ನು ಕಟ್ಟುತ್ತಾನೆ. ಹಾಗಾಗಿ ದಕ್ಷಿಣ ಆಫ್ರಿಕಾದ ಸರ್ಕಾರ ಕೂಡ ಈ ಸಿಂಹಬೇಟೆಯಲ್ಲಿ ಶಾಮೀಲಾಗಿದೆ ಎನ್ನಬೇಕು. ಇಂಥ ಬೇಟೆಯ ಆದಾಯವೇ ವರ್ಷಕ್ಕೆ 70 ದಶಲಕ್ಷ ಅಮೆರಿಕನ್ ಡಾಲರ್‌ಗಳು ಎಂದು 2013ರಲ್ಲಿ ಅಂದಾಜು ಮಾಡಲಾಗಿತ್ತು. ಇದು ಕಾಡಿನ ಕ್ರೂರ ಮೃಗಗಳ ಬೇಟೆಗಾಗಿ ಪಡೆವ ಹಣ. ಆದರೆ, ವೀರರಂತೆ ಈ ಜನರು ಬೇಟೆಯಾಡುವುದು 'ಸಾಕು ಸಿಂಹ'ಗಳನ್ನು ಎಂಬುದು ವಾಸ್ತವ, ಚೋದ್ಯ.

ಕಳೆದ ವರ್ಷ ಸಿಂಹದ ದೊಡ್ಡಿಗಳಲ್ಲಿದ್ದ 8 ಸಿಂಹಿಣಿಯರನ್ನು ಇಂತಹ ಬೇಟೆಗಾರರ ವಿಮಾನ ಬಂದಿಳಿದ ಹೊತ್ತಿನಲ್ಲೇ ಕಾಡಿಗೆ ಬಿಟ್ಟದ್ದನ್ನು ಗಾಬ್ಬೆಟ್ ಎನ್ನುವ ಬೇಟೆಯ ಮಾರ್ಗದರ್ಶಿ ಬಹಿರಂಗಪಡಿಸಿದ್ದ. ಮೊದಲನೇ ಸಿಂಹ ಕಾಡಿಗೆ ತಲುಪಿದ ಅರ್ಧ ಗಂಟೆಯಲ್ಲಿ ಬೇಟೆಗೆ ಬಲಿಯಾದುದನ್ನು ಮಾಧ್ಯಮಗಳಿಗೆ ತಿಳಿಸಿದ್ದ. ಮನುಷ್ಯರಿಗೆ ಪರಿಚಿತವೇ ಆಗಿದ್ದ ಸಾಕುಸಿಂಹಗಳಿಗೆ ಕಾಡಿನ ಪರಿಚಯವಿರುವುದಿಲ್ಲ. ಬೇಟೆಯಾಡುವುದಿರಲಿ, ಬೇಟೆಗಾರನಿಂದ ತಪ್ಪಿಸಿಕೊಂಡು ಹೋಗುವುದು ಕೂಡ ಅವುಗಳಿಗೆ ತಿಳಿದಿರುವುದಿಲ್ಲ. ಒಂದು ಸಿಂಹ ಬೇಲಿಯ ಬಳಿ ನಿಂತಿರುವಾಗ, ಮತ್ತೊಂದು ತಗ್ಗಿನಲ್ಲಿ ಮಲಗಿರುವಾಗ, ಬೇಟೆಗಾರರ ವಿನೋದಕ್ಕೆ ಆಹುತಿಯಾದುದನ್ನು ಗಾಬ್ಬೆಟ್ ತನ್ನ ವರದಿಯಲ್ಲಿ ವಿವರಿಸಿದ್ದಾನೆ. ಆದರೆ ಇಂತಹ ದಂಧೆಯಲ್ಲಿ ತೊಡಗಿಕೊಂಡಿರುವ ಮಾರ್ಗದರ್ಶಿಗಳು – 'ಅಬ್ಬಾ... ಎಂತಹ ಗುರಿ, ಎಂತಹ ಬೇಟೆ, ಶಹಬ್ಬಾಶ್...' ಎಂದು ಹೊಗಳುತ್ತ ಆ ಬೇಟೆಗಾರರ 'ಅಹಂ' ನೀವುತ್ತ, ನಿಜವನ್ನು ಮುಚ್ಚಿಡುವ ಅಣಕವನ್ನು ಆತ ವಿಶದವಾಗಿ ವರದಿ ಮಾಡಿದ್ದಾನೆ.

## ವನ್ಯಮೃಗಗಳ ಮಾರಣಹೋಮ

2004–2014ರ ಅವಧಿಯಲ್ಲಿ ಲಕ್ಷಾಂತರ ಕಾಡುಮೃಗಗಳು ಬೇಟೆಗೊಳಗಾಗಿವೆಯಂತೆ. ಅದರಲ್ಲಿ ಕನಿಷ್ಠ 2 ಲಕ್ಷ ಪ್ರಾಣಿಗಳು ಅಳಿವಿನ ಅಂಚಿನಲ್ಲಿರುವ ಆನೆ, ಸಿಂಹ, ಘೇಂಡಾಮೃಗಗಳು! ಬೇಟೆಗೆ ಬಲಿಯಾದ ಪ್ರಾಣಿಗಳ ಆಮದಿನಲ್ಲಿ ಅಮೆರಿಕ ಮಂಚೂಣಿಯಲ್ಲಿದ್ದರೆ, ದಕ್ಷಿಣ ಆಫ್ರಿಕಾ ರಫ್ತಿನಲ್ಲಿ ಅಗ್ರಸ್ಥಾನದಲ್ಲಿದೆ. ಅತಿ ಹೆಚ್ಚಿನ ಬೇಡಿಕೆಯಿರುವುದು ಸಿಂಹಗಳಿಗೆ ಎಂದಮೇಲೆ ಕೇಳಬೇಕೆ? 2004–2014ರ ದಶಕವೊಂದರಲ್ಲೇ 17 ಲಕ್ಷ ಪ್ರಾಣಿಗಳ ಟ್ರೋಫಿಗಳನ್ನು ದಕ್ಷಿಣ ಆಫ್ರಿಕಾ ಮಾರಿಕೊಂಡಿದೆ. ಅವುಗಳಲ್ಲಿ 11000 ಟ್ರೋಫಿಗಳು ಸಿಂಹಗಳಿಂದ ರೂಪುಗೊಂಡಿವೆ.

ಸಹಸ್ರಾರು ಸಾಕುಸಿಂಹಗಳ ಜೊತೆಗೆ ದಕ್ಷಿಣ ಆಫ್ರಿಕಾದ 'ರಕ್ಷಿತ' ಅರಣ್ಯ ಪ್ರದೇಶದಲ್ಲಿ ಕೇವಲ 2300 ಸಿಂಹಗಳು ಇವೆಯೆನ್ನುವುದನ್ನು ನೆನಪಿಸಿಕೊಳ್ಳಬೇಕು. ಇಡೀ ಪ್ರಪಂಚದಲ್ಲಿ ಉಳಿದಿರುವ ಸಿಂಹಗಳ ಸಂಖ್ಯೆ ಸುಮಾರು 20 ಸಾವಿರ. ಒಂದು ಶತಮಾನದ ಹಿಂದೆ ಇವುಗಳ ಸಂಖ್ಯೆ 2 ಲಕ್ಷದಷ್ಟಿತ್ತು ಎನ್ನುವುದು ಸಿಂಹಗಳ ಸಂಖ್ಯೆ ಯಾವ ಮಟ್ಟದಲ್ಲಿ ಇಳಿಯುತ್ತಿದೆ ಎನ್ನುವುದಕ್ಕೆ ಉದಾಹರಣೆಯಂತಿದೆ.

2004–2014ರ ನಡುವೆ 107 ದೇಶಗಳಿಗೆ ಕಸಾಯಿ ಖಾನೆಯಂತಹ ಕೊಲ್ಲುವ ಮನೆಯಲ್ಲಿ ಸಾಯಿಸಿದ ಪ್ರಾಣಿಗಳ ದೇಹದ ಅಂಗಾಂಗಗಳು ಮಾರಾಟವಾದವು. ಹೀಗೆ ಶೇ. 97ರಷ್ಟು ಅಂಗಾಂಗಗಳನ್ನು ಆಮದು ಮಾಡಿಕೊಂಡ ದೇಶಗಳು 'ಶ್ರೀಮಂತ ದೇಶ'ಗಳ ಪಟ್ಟಿಯಲ್ಲಿವೆ. ಅವುಗಳಲ್ಲಿ ಅಮೆರಿಕಕ್ಕೆ ಮೊದಲ ಸ್ಥಾನ.

ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಸಾಕುಸಿಂಹಗಳ ಅಕ್ರಮ ಬೇಟೆಯ ಕುರಿತು ಲಾರ್ಡ್ ಆಶ್ ಕ್ರಾಫ್ಟ್ ವರ್ಷಗಟ್ಟಲೆ ಪತ್ತೇದಾರಿಕೆ ನಡೆಸಿದ್ದಾನೆ. ಇಂಗ್ಲೆಂಡಿನ ವ್ಯಕ್ತಿಯೊಬ್ಬ ಒಂದು ಸಿಂಹವನ್ನು ಹತ್ತಿರದಿಂದ ಗುಂಡಿಟ್ಟು ಕೊಲ್ಲಲು 3 ಲಕ್ಷ ರೂಪಾಯಿ ಕಪ್ಪುಹಣ ನೀಡಿದ್ದ ವಿವರವನ್ನು ಹೊರಹಾಕಿದ್ದಾನೆ. ಕೇವಲ 2 ದಿನಗಳಲ್ಲಿ 54 ಸಿಂಹಗಳನ್ನು ಕುರಿಗಳನ್ನು ಕಡಿದಂತೆ ಕಡಿದು ರಕ್ತದೋಕುಳಿಯ ನಡುವೆಯೇ ಅವುಗಳ ಚರ್ಮ, ಉಗುರು, ಮೂಳೆಗಳನ್ನು ಬೇರ್ಪಡಿಸಿ, ಮಿಕ್ಕ ದೇಹದ ಭಾಗಗಳನ್ನು ತಿಪ್ಪೆಗೆ ಎಸೆದ ಘಟನೆಯನ್ನು ಮಾಧ್ಯಮಗಳಿಗೆ ಬಹಿರಂಗಗೊಳಿಸಿದ್ದಾನೆ. ಇವನ ತನಿಖೆಯ ಫಲವಾಗಿ ಸಿಂಹವೊಂದನ್ನು ಬೇಟೆಯ ಮಿಕವಾಗುವುದನ್ನು ತಪ್ಪಿಸಿ, ರಕ್ಷಿಸಿ ಕಾಡಿಗೆ ಬಿಡಲಾಯಿತು. ಆದರೆ ಅದು ಕೇವಲ ಒಂದು ಸಿಂಹದ ಕಥೆ. ಮಿಕ್ಕ ಸಿಂಹಗಳು ಮನುಷ್ಯನ ದುರಹಂಕಾರದ ಪ್ರತಿಷ್ಠೆಗೆ ಮಿಕಗಳಾಗುವುದನ್ನು ತಡೆಯಲು ಸಾಧ್ಯವಾಗಲಿಲ್ಲ.

## ಸಿಂಹುಲಿಗಳ ಸೃಷ್ಟಿ

ಇದೆಲ್ಲದರ ಜೊತೆಗೆ ಸಿಂಹ–ಹುಲಿಗಳನ್ನು ಒಟ್ಟಿಗೆ ಕೂಡಿಸಿ 'ಸಿಂಹುಲಿ'ಗಳ ಕ್ರಾಸ್ ಬ್ರೀಡ್ ತಳಿಗಳನ್ನು ಸೃಷ್ಟಿಸಿ ದೊಡ್ಡ ಪ್ರಾಣಿಗಳನ್ನು ಸೃಷ್ಟಿಸುವ ಪ್ರಯತ್ನ ನಡೆದಿವೆ. ಇಂತಹ ಪ್ರಾಣಿಗಳನ್ನು ಬೇಟೆಯಾಡಲು ಇನ್ನೂ ಹೆಚ್ಚಿನ ಹಣ ಪಡೆಯಲಾಗುತ್ತದೆಯಂತೆ. ಈ ರೀತಿಯ ಬ್ರೀಡಿಂಗ್‌ನ ಮೂಲಕ ಹುಟ್ಟುವ 'ಸಿಂಹುಲಿ'ಗಳು ಹಲವು ನ್ಯೂನತೆಯೊಂದಿಗೆ, ಕಾಯಿಲೆಗಳೊಂದಿಗೆ ಹುಟ್ಟಿದರೂ ಅವುಗಳ ಮೂಳೆಗಳು ದೊಡ್ಡ ಗಾತ್ರಕ್ಕೆ ಬೆಳೆಯುವ ಕಾರಣ ಅವುಗಳ ಸಂಖ್ಯೆ ಬೆಳೆಯುತ್ತಿದೆ. ಸಿಂಹಗಳ ಮೂಳೆಗಳನ್ನು ಪುಡಿ ಮಾಡಿ ಔಷಧಗಳನ್ನಾಗಿ ಮಾರುವ ದೇಶಗಳಿಗೆ ಇವನ್ನು ಮಾರಲಾಗುವ ಕಾರಣ ಯಾವುದೇ ಕರುಣೆಯಿಲ್ಲದೆ ಅವುಗಳನ್ನು ಶೋಷಿಸಲಾಗುತ್ತಿದೆ.

ದಕ್ಷಿಣ ಆಫ್ರಿಕಾದ ಸರ್ಕಾರಕ್ಕೆ ಇಂತಹ ಬರ್ಬರ ಸಿಂಹ ಸಾಕಾಣಿಕೆಯನ್ನು ನಿಲ್ಲಿಸಲು ಲಾರ್ಡ್ ಆಶ್ ಕ್ರಾಫ್ಟ್ ಸಲ್ಲಿಸಿರುವ ಹಲವು ಮನವಿಗಳಿಗೆ ಬೆಲೆ ಸಿಕ್ಕಿಲ್ಲ. ಹೀಗಾಗಿ ಈ ರೀತಿಯ ಆಮದುಗಳನ್ನು ಪೂರ್ತಿ ನಿಲ್ಲಿಸುವಂತೆ ಈತ ಇಂಗ್ಲೆಂಡ್ ಸರ್ಕಾರವನ್ನು ಆಗ್ರಹಿಸಿದ್ದಾನೆ. ಸದ್ಯಕ್ಕೆ ಇಂಗ್ಲೆಂಡಿನಲ್ಲಿ ಈ ರೀತಿಯ ಆಮದು ಬಹಿಷ್ಕೃತವಲ್ಲ. ಒಮ್ಮೆ ಇಂಗ್ಲೆಂಡಿಗೆ ತಲುಪಿದ ನಂತರ ಇಂಗ್ಲೆಂಡಿನಿಂದ ಅಮೆರಿಕಾಗೆ ಸಾಗಿಸಲು ಹಲವು ಕಳ್ಳ ಮಾರ್ಗಗಳು ಇವೆಯಂತೆ.

ಗಂಡು ಸಿಂಹದ ಕೇಶದ ಗಮ್ಮತ್ತಿನ ಮೇಲೆ 10 ಲಕ್ಷದಿಂದ ಹಿಡಿದು 43 ಲಕ್ಷಗಳವರೆಗೆ ಅವುಗಳ ಬೇಟೆಯ ಬೆಲೆಯನ್ನು ಗೊತ್ತುಪಡಿಸಿರುವುದಿದೆ. ದಕ್ಷಿಣ ಪೂರ್ವ ಏಶಿಯಾ ಮತ್ತು ಚೀನಾದಲ್ಲಿ ಲೈಂಗಿಕ ಉದ್ದೀಪನಗಳ ತಯಾರಿಕೆಗೆ ಸಿಂಹಗಳ ದೇಹದ ಭಾಗಗಳನ್ನು ಬಳಸುತ್ತಿರುವುದು ಕೂಡ ಕಳ್ಳಬೇಟೆಗೆ ಕಾರಣವಾಗಿದೆ. ಕೆಲವೊಮ್ಮೆ ಸಿಂಹಗಳನ್ನು ಸುಲಭ ಬೇಟೆಗಳನ್ನಾಗಿಸಲು ಅವುಗಳಿಗೆ ಅರೆ ಅರಿವಳಿಕೆಯ ಚುಚ್ಚುಮದ್ದನ್ನು ನೀಡಿ ಸಣ್ಣ ಕಾಂಪೌಂಡಿನಲ್ಲಿ ಬಿಡಲಾಗುತ್ತದೆಯಂತೆ.

ದಕ್ಷಿಣ ಆಫ್ರಿಕಾಗೆ ಹೋದಾಗ ಸಿಂಹದ ಮರಿಗಳ ಜೊತೆ ಆಟವಾಡುವ ಅನುಭವಕ್ಕಾಗಿ, ಬೆಳೆದ ಸಿಂಹಗಳ ಜೊತೆ ವಾಕಿಂಗ್ ಹೋಗಲು ಜನರು ಸಹಸ್ರಾರು ರೂಪಾಯಿ ಕೊಡುವ ಮೂಲಕ 'ಸಿಂಹದ ಫಾರಂ'ಗಳು ಬೆಳೆಯಲು ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆ.

